1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ., ದಂಡಾಧಿಕಾರಿಗಳವರ ನ್ಯಾಯಾಲಯ, ಕೃಷ್ಣರಾಜಪೇಟೆ

ಸಿ.ಸಿ. ನಂ. **354/2017**

| | | |
|---|---|---|
| ಸಾಕ್ಷಿದಾರರ ಹೆಸರು | ಶಾರದಮ್ಮ | ಡಿ.ಡಬ್ಲ್ಯೂ.1 |
| ಗಂಡನ ಹೆಸರು | ಪುಟ್ಟಬಸವೇಗೌಡ | |
| ವಯಸ್ಸು | 62 ವರ್ಷ | |
| ವೃತ್ತಿ | ಗೃಹಿಣಿ | |
| ವಾಸ ಸ್ಥಳ | ಬೆಂಗಳೂರು | |

ಸಾಕ್ಷಿಗೆ ದಿನಾಂಕಃ **02.07.2026** ರಂದು ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಆರೋಪಿ ಪರ. ಶ್ರೀ. ವಿ.ಎಸ್. ವಕೀಲರಿಂದ.

ಕೃಷ್ಣೇಗೌಡರವರು ನನ್ನ ಮೇಲೆ ನಾನು ಚೆಕ್ ಕೊಟ್ಟಿದ್ದೇನೆ ಎಂದು ಹೇಳಿ ಈ ಪ್ರಕರಣ ಹಾಕಿರುತ್ತಾರೆ. ಆದರೆ ನಾನು ಯಾರಿಗೂ ಚೆಕ್ ಕೊಟ್ಟಿರುವುದಿಲ್ಲ. ಕೃಷ್ಣೇಗೌಡರು ಯಾರು ಎಂಬುದು ನನಗೆ ಗೊತ್ತಿಲ್ಲ. ನನ್ನ ತಮ್ಮನಿಗೆ ಜಮೀನಿನ ವ್ಯವಹಾರ ಒಂದರಲ್ಲಿ ನನ್ನ ಚೆಕ್ ಅನ್ನು ಕೊಟ್ಟಿರುತ್ತೇನೆ. ನನ್ನ ತಮ್ಮನಿಗೂ ಹಾಗೂ ನನಗೂ ಒಂದು ವ್ಯವಹಾರದಲ್ಲಿ ಗಲಾಟೆ ಯಾಗಿರುತ್ತದೆ.

2. ನನ್ನ ತಮ್ಮ ನನ್ನನ್ನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಹೇಳಿರುತ್ತಾನೆ. ನಾನು ಹೇಳುವುದಿಲ್ಲ ಎಂದಾಗ ನಂತರ ಆ ಚೆಕ್ ಅನ್ನು ಏನು ಮಾಡಿರುತ್ತಾನೆ ಎಂದು ಗೊತ್ತಿರುವುದಿಲ್ಲ. ನಂತರ ಇವರು ಈ ಕೇಸ್ ಹಾಕಿರುತ್ತಾರೆ. ವಕೀಲರ ಮುಖಾಂತರ ಪ್ರಕರಣ ಹಾಕಿರುವುದು ಗೊತ್ತಾಗಿರುತ್ತದೆ. ಪಿರ್ಯಾದಿಯನ್ನು ನಮ್ಮ ವಕೀಲರು ನ್ಯಾಯಾಲಯದಲ್ಲಿ ತೋರಿಸಿದಾಗಲೇ ಅವರನ್ನು ನಾನು ನೋಡಿರುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆ : ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಸ ಒ .**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ .**